ನಾನಿಟ್ಟುಕೊಳ್ಳುತ್ತೇನೆ ಅಮ್ಮನ ನೆನಪಿಗೆ...' ಎಲ್ಲರೂ ಗುರ್ರಾಯಿಸಿದ್ದರು ಒಮ್ಮೆಗೇ. 'ತನ್ನ ಚಿನ್ನದಲ್ಲಿ ಒಂದು ಚೂರನ್ನೂ ನಿನ್ನ ಹೆಂಡತಿ ಮುಟ್ಟಬಾರದೆಂದಿದ್ದಾಳೆ ಅಮ್ಮ. ಹಾಗಿರುವಾಗ ಅದು ಹೇಗೆ ನಿನಗೆ ಕೊಡಲು ಬರುತ್ತದೆ' ಎನ್ನುತ್ತ ಒಬ್ಬ ನಿಧಾನವಾಗಿ ಆ ನತ್ತನ್ನೂ ತನ್ನ ಜೇಬಿಗಿಳಿಸಿದ್ದ. ಇವ ತನ್ನ ಸುರುವಿನ ದಿನಗಳಲ್ಲಿನ ಸಂಪಾದನೆಯಲ್ಲಿ ಅಮ್ಮನಿಗೆ ಮಾಡಿಸಿಕೊಟ್ಟದ್ದು. ಅದೂ ಎಂತಹ ಸಂದರ್ಭ. ಬಡ ತವರಿನವರು ಕಷ್ಟ ಪಟ್ಟು ಒಂದೆರಡು ಪವನು ಚಿನ್ನವನ್ನು ಹಾಕಿದ್ದರು ಅಮ್ಮನಿಗೆ. ಅದರಲ್ಲಿ ಒಂದು ಮೂಗಿನ ನತ್ತು. ಅದೊಂದು ದಿನ ಗದ್ದೆ ಬಯಲಿನಲ್ಲೋ ಹೊರಗಡೆ ಹಾಡಿಯಲ್ಲೋ ಕೆಲಸ ಮಾಡುವಾಗ ಅದು ಕಳೆದು ಹೋಗಿತ್ತು. ತಲೆ ಬಿಚ್ಚಿಹಾಕಿಕೊಂಡು ಹುಡುಕಿದರೂ ಸಿಕ್ಕಿರಲಿಲ್ಲ. ಸಾಮಾನ್ಯವಾಗಿ ಅಂತಹುದಕ್ಕೆಲ್ಲ ತಲೆ ಕೆಡಿಸಿಕೊಳ್ಳದ ಅಪ್ಪನೂ ಚಿನ್ನದ ಚೂರನ್ನು ಕಳೆದುಕೊಂಡದ್ದು ಗೊತ್ತಾದರೆ ತಾರಾಮಾರಾಗಿ ಬಯ್ದಾರು ಎಂದು ಹೆದರಿದ ಅಮ್ಮ ಈ ಮಕ್ಕಳನ್ನೆಲ್ಲ ಬೇಡಿದ್ದಳು. ಆಗಲೇ ಮದುವೆಯಾದವರು ಮದುವೆಗೆ ತಯಾರಾದವರು ಎಲ್ಲ ಕೈ ಆಡಿಸಿದ್ದರು. ಆದರೆ, ಅದೇ ತಾನೇ ಕೆಲಸಕ್ಕೆ ಸೇರಿದ ಇವನಿಗೆ ಮೊದಲ ಸಂಬಳ ಕೈಗೆ ಬರಲು ನಾಲ್ಕು ದಿನಗಳಿದ್ದುವು. ಅಂದೇ ನಂಬಿಗಸ್ಥ ಸಹೋದ್ಯೋಗಿಯೊಂದಿಗೆ ಅಕ್ಕಸಾಲಿಯ ಹತ್ತಿರ ಹೋಗಿ ಸಂಬಳ ಬಂದ ನಂತರ ಕೊಡುತ್ತೇನೆಂದು ಹೇಳಿ ಅಮ್ಮನಿಗೆ ಕಳೆದುಕೊಂಡಂತಹುದೇ ನತ್ತನ್ನು ಮಾಡಿಸಿಕೊಟ್ಟಿದ್ದ. 'ನೀನೊಬ್ಬನೇ ನನ್ನ ಮಗ... ನನ್ನ ಮರ್ಯಾದೆ ಉಳಿಸಿದೆ' ಎಂದು ಆ ದಿನ ಅಮ್ಮ ಇವನನ್ನು ತಬ್ಬಿ ಅತ್ತದ್ದು ಇಂದೂ ನೆನಪಿದೆ ಅವನಿಗೆ. ಸಂಬಳದ ದಿನ ಕೈಗೆ ಬಂದ ಹಣವನ್ನೆಲ್ಲವನ್ನೂ ಅಕ್ಕಸಾಲಿಗೆ ಕೊಟ್ಟು ಬಂದವ ಅಪ್ಪ ಮತ್ತು ಅಣ್ಣಂದಿರಿಗೆ ಸಾವಿರ ಸಬೂಬು ಹೇಳಿದ್ದ. ಮುಂದೆ ಅವನೇ ತಿಂಗಳೆರಡು ತಿಂಗಳಿಗೊಮ್ಮೆ ಸಾಧ್ಯವಾದಷ್ಟರ ಮಟ್ಟಿಗೆ ಚಿನ್ನ ಖರೀದಿಸುತ್ತ ಅಮ್ಮನ ಆಭರಣದ ಭಂಡಾರವನ್ನು ತುಂಬಿಸಿದ್ದ. ಅದನ್ನೇ ಈಗ ಎಲ್ಲರೂ ಆತುರದಿಂದ ಬಾಚಿಕೊಂಡದ್ದು.

*****

ನಮ್ಮ ಶಂಭು ಕುರಿಮರಿಯಂತೆ ತಲೆ ತಗ್ಗಿಸಿಕೊಂಡು ಅಲ್ಲಿಂದ ಹೊರಡುತ್ತಾನೆ. ಕೊನೆಯದಾಗಿ ಒಮ್ಮೆ ತನ್ನದೂ ಪಾಲಿದ್ದ ಆ ದೊಡ್ಡ ಮನೆಯನ್ನು ಕಣ್ತುಂಬ ತುಂಬಿಸಿಕೊಳ್ಳುತ್ತ ಆ ಕಣ್ಣುಗಳಲ್ಲಿ ನೀರು ತುಂಬುತ್ತಿರುವುದನ್ನು ಇನ್ಯಾರಾದರೂ ನೋಡುವ ಮುನ್ನವೇ ಜಾಗ ಖಾಲಿ ಮಾಡಬೇಕು ಎಂದುಕೊಳ್ಳುತ್ತ ಅಲ್ಲಿಂದ ಹೊರಟುಬಿಡುತ್ತಾನೆ.

## ಪಿ.ಪಿ. ಉಪಾಧ್ಯ

ಭಾರತೀಯ ಜೀವ ವಿಮಾ ನಿಗಮದಲ್ಲಿ ದೀರ್ಘ ಕಾಲದ ಸೇವೆ ಸಲ್ಲಿಸಿರುವ ಪಿ.ಪಿ. ಉಪಾಧ್ಯ ಹಿರಿಯ ವಿಭಾಗಾಧಿಕಾರಿಯಾಗಿ ನಿವೃತ್ತರಾಗಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಅವರು ಜೀವ ವಿಮಾ ನಿಗಮದ ಭಾರತದ ಬೇರೆ ಬೇರೆ ಕಡೆಗಳಲ್ಲಿ ಮಾತ್ರವಲ್ಲ, ಸಾಗರೋತ್ತರ ಶಾಖೆಯಾದ ಇಂಗ್ಲೆಂಡಿನಲ್ಲಿಯೂ ನಾಲ್ಕು ವರ್ಷ ಕೆಲಸ ಮಾಡಿದ್ದಾರೆ.
70ರ ದಶಕದ ಪೂರ್ವಾರ್ಧದಲ್ಲಿ ಸಣ್ಣ ಕತೆಗಳನ್ನು ಬರೆಯಲು ಆರಂಭಿಸಿದ ಅವರು 'ಮಯೂರ', 'ಸುಧಾ' ಸೇರಿದಂತೆ ಕನ್ನಡದ ಬಹುತೇಕ ಮಾಸಪತ್ರಿಕೆ, ವಾರ ಪತ್ರಿಕೆ ಮತ್ತು ದಿನಪತ್ರಿಕೆಗಳಲ್ಲಿ ಸುಮಾರು 100ಕ್ಕೂ ಹೆಚ್ಚು ಕತೆಗಳನ್ನು ಪ್ರಕಟಿಸಿದ್ದಾರೆ. ಅವರ ಒಂದು ಕಥಾ ಸಂಗ್ರಹ ಮತ್ತು ವ್ಯಕ್ತಿವಿಕಸನದ ಬಗ್ಗೆ ಎರಡು ಪುಸ್ತಕಗಳು ಪ್ರಕಟವಾಗಿವೆ.